# ಹಾಡು ಮತ್ತು ಮಾತು



ಮುಂದಿನ ತಿಂಗಳು 10ಕ್ಕೆ ಯೇಸುದಾಸ್ ಅವರಿಗೆ 80 ತುಂಬುತ್ತದೆ. ಯೇಸುದಾಸ್ ಎಂದರೆ ನೆನಪಾಗುವುದು ಹಾಡು, ಹಾಡು ಮತ್ತು ಹಾಡು. ನಗುಮುಖದ ಈ ಗಡ್ಡಧಾರಿ ಹಾಡಿರುವ ಹಾಡುಗಳ ಸಂಖ್ಯೆ 80 ಸಾವಿರ ದಾಟಿದೆ ಎನ್ನುವುದು ಒಂದು ಅಂದಾಜು. ಅದನ್ನು ವಿಶ್ವದಾಖಲೆ ಎಂದು ಹೇಳುವವರೂ ಇದ್ದಾರೆ. ಮಲಯಾಳಂ, ತಮಿಳು, ತೆಲುಗು, ಹಿಂದಿ, ಕನ್ನಡ, ಬಂಗಾಳಿ, ಒಡಿಯಾ, ಅರೇಬಿಕ್, ಇಂಗ್ಲಿಷ್, ಲ್ಯಾಟಿನ್, ರಷ್ಯನ್... ಯಾವ ಭಾಷೆಗಳಲ್ಲಿ ಯೇಸುದಾಸ್ ಹಾಡಿಲ್ಲ ಹೇಳಿ? ಭಾರತೀಯ ಭಾಷೆಗಳಲ್ಲಿ ಪಂಜಾಬಿ, ಅಸ್ಸಾಮಿ, ಕೊಂಕಣಿ ಮತ್ತು ಕಾಶ್ಮೀರಿ ಬಿಟ್ಟು ಬೇರೆಲ್ಲ ಭಾಷೆಗಳಲ್ಲಿ ಯೇಸುದಾಸ್ ಹಾಡಿದ್ದಾರೆ. 2006ರಲ್ಲಿ ಚೆನ್ನೈನ ಎವಿಎಂ ಸ್ಟುಡಿಯೋದಲ್ಲಿ ದಕ್ಷಿಣ ಭಾರತದ ಹಲವು ಭಾಷೆಗಳಲ್ಲಿ ಒಟ್ಟು 16 ಹಾಡುಗಳನ್ನು ಒಂದೇ ದಿನದಲ್ಲಿ ರೆಕಾರ್ಡಿಂಗ್ ಮಾಡಿದ್ದು ಯೇಸುದಾಸ್ ಅವರ ಅಭಿಮಾನಿಗಳು ಇವತ್ತಿಗೂ ನೆನಪಿಸಿಕೊಳ್ಳುವ ದಾಖಲೆ.

ಹೀಗೆ ಹಾಡಿನ ಮೂಲಕವೇ ಜಗದ್ವಿಖ್ಯಾತಿ ಹೊಂದಿರುವ ಯೇಸುದಾಸ್, ಕೆಲವೊಮ್ಮೆ ತಮ್ಮ ಮಾತಿನ ಮೂಲಕವೂ ವಿವಾದದ ಕಿಡಿ ಹಾರಿಸುತ್ತಾರೆ. ಇವರ ಇತ್ತೀಚಿನ ಕಿಡಿನುಡಿ– ಶಬರಿಮಲೈ ಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ಮಹಿಳೆಯರ ಪ್ರವೇಶದ ಕುರಿತು. ಶಬರಿಮಲೈ ದೇವಾಲಯದಲ್ಲಿ 10ರಿಂದ 50 ವರ್ಷದ ಒಳಗಿನ ಮಹಿಳೆಯರಿಗೆ ಪ್ರವೇಶವಿಲ್ಲ. ಈ ನಿಷೇಧದ ಪ್ರಶ್ನೆ ಸುಪ್ರೀಂಕೋರ್ಟ್ ಮೆಟ್ಟಿಲನ್ನೂ ಹತ್ತಿಬಂದಿದೆ. ಈಗಲೂ ಪ್ರವೇಶಕ್ಕಾಗಿ ಮಹಿಳೆಯರ ಹೋರಾಟ ನಿಂತಿಲ್ಲ.

ಶಬರಿಮಲೈಯ ಈ ಮಹಿಳಾ ಪ್ರವೇಶದ ವಿವಾದದ ಬಗ್ಗೆ ಕಳೆದ ವಾರ ಯೇಸುದಾಸ್ ಮಾತನಾಡಿದ್ದಾರೆ. 'ಸುಂದರ ಮಹಿಳೆಯರು ಈಗ ಧರಿಸುತ್ತಿರುವಂತಹ ಉಡುಪಿನಲ್ಲಿ ಶಬರಿಮಲೈ ದೇವಸ್ಥಾನಕ್ಕೆ ಹೋದರೆ ಸ್ವಾಮಿ ಅಯ್ಯಪ್ಪ ಖಂಡಿತಾ ಕಣ್ಣು ತೆರೆದು ನೋಡಲಾರ. ಆದರೆ ಅಲ್ಲಿರುವ ಇತರ ಅಯ್ಯಪ್ಪ (ಸ್ವಾಮಿ)ಗಳು ನೋಡಬಹುದು. ಇದು ಖಂಡಿತಾ ಒಳ್ಳೆಯದಲ್ಲ' ಎನ್ನುವುದು ಯೇಸುದಾಸ್ ನೀಡಿರುವ ಸ್ಟೇಟ್‌ಮೆಂಟ್. ಈ ಹೇಳಿಕೆಯ ಬೆನ್ನಲ್ಲೇ ಯೇಸುದಾಸ್ ವಿರುದ್ಧ ಪ್ರಗತಿಪರರ ಟೀಕೆಗಳ ಸುರಿಮಳೆಯಾಗಿದೆ. ಮಹಿಳೆಯರ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸುವವರನ್ನು ಯೇಸುದಾಸ್‌ರಂತಹ ಮೇರುಗಾಯಕರು ಬೆಂಬಲಿಸುವುದು ಎಳ್ಳಷ್ಟೂ ಸರಿಯಲ್ಲ ಎನ್ನುವುದು ಈ ಮಹಿಳೆಯರ ವಾದ.

ಯೇಸುದಾಸ್ ಅವರಿಗೂ ಶಬರಿಮಲೈ ದೇವಾಲಯಕ್ಕೂ ಒಂದು ವಿಶಿಷ್ಟ ನಂಟಿದೆ. ಪ್ರತಿದಿನ ಸಂಜೆ ದೇವಸ್ಥಾನದ ಬಾಗಿಲು ಹಾಕುವ ಮುನ್ನ ಅಲ್ಲಿ ಯೇಸುದಾಸ್ ಅವರು ಹಾಡಿರುವ 'ಹರಿವರಸನಂ..' ಹಾಡನ್ನು ಹಾಕುತ್ತಾರೆ. ಈಗ ಅಯ್ಯಪ್ಪ ಭಕ್ತರಿಗೂ ಯೇಸುದಾಸ್ ಎಂದರೆ ಭಕ್ತಿ ಮತ್ತು ಪ್ರೀತಿ.

ಹಾಗೆ ನೋಡಿದರೆ ಯೇಸುದಾಸ್ ತಮ್ಮ ಮಾತಿನ ಕಾರಣಕ್ಕಾಗಿ ವಿವಾದದ ಕಿಡಿ ಹೊತ್ತಿಸಿರುವುದು ಇದು ಮೊದಲೇನಲ್ಲ. 2014ರಲ್ಲೊಮ್ಮೆ ಹೀಗೆಯೇ ಹೆಣ್ಣುಮಕ್ಕಳು ಯೇಸುದಾಸ್ ವಿರುದ್ಧ ಸಿಟ್ಟಿಗೆದ್ದು ಕೂಗಾಡಿದ್ದು ನಡೆದಿತ್ತು. ಆಗ ಯೇಸುದಾಸ್ ನೀಡಿದ ಹೇಳಿಕೆ ಹೆಣ್ಣುಮಕ್ಕಳ ಡ್ರೆಸ್ ಬಗ್ಗೆ! 'ಮಹಿಳೆಯರು ಜೀನ್ಸ್ ಪ್ಯಾಂಟ್ ಧರಿಸಬೇಡಿ. ಇದು ಭಾರತೀಯ ಸಂಸ್ಕೃತಿಗೆ ವಿರುದ್ಧ. ಜೀನ್ಸ್ ಧರಿಸಿ ಇತರರಿಗೆ ತೊಂದರೆ ಕೊಡಬೇಡಿ. ಸರಿಯಾದ ರೀತಿಯಲ್ಲಿ ಡ್ರೆಸ್ ಮಾಡಿ. ಗಂಡುಮಕ್ಕಳಂತೆ ಡ್ರೆಸ್ ಹಾಕಿಕೊಳ್ಳಬೇಡಿ' ಎಂದು ಯೇಸುದಾಸ್ ಹೇಳಿದ್ದು ದೊಡ್ಡ ಸುದ್ದಿಯಾಗಿತ್ತು. ಪ್ರಗತಿಪರ ಸಂಘಟನೆಗಳು ಈ ಹೇಳಿಕೆಯ ವಿರುದ್ಧ ಅಲ್ಲಲ್ಲಿ ಪ್ರತಿಭಟನೆ ಮಾಡಿದ್ದವು.

ಕಳೆದ ವರ್ಷ ಯೇಸುದಾಸ್ ಅವರ 'ಸೆಲ್ಫೀ' ಹೇಳಿಕೆ ವಿವಾದದ ಕಿಡಿ ಹೊತ್ತಿಸಿತ್ತು. ನವದೆಹಲಿಯಲ್ಲಿ ತಮಗೆ ಎದುರಾದ ಯುವಕನೊಬ್ಬ ಜೊತೆಗೆ ಸೆಲ್ಫೀ ತೆಗೆದದ್ದನ್ನು ನೋಡಿ ಯೇಸುದಾಸ್ ಸಿಟ್ಟಿಗೆದ್ದಿದ್ದರು. ಆ ಹುಡುಗನನ್ನು ಹಿಡಿದು, ಕ್ಯಾಮೆರಾ ತೆಗೆದುಕೊಂಡು ಅದರಲ್ಲಿದ್ದ ಸೆಲ್ಫೀ ಫೋಟೋವನ್ನು ಡಿಲೀಟ್ ಮಾಡಿದ್ದರು. ಹಾಗೆಂದು ತಮ್ಮ ಫೋಟೊ ಕ್ಲಿಕ್ಕಿಸುವುದಕ್ಕೆ ಯೇಸುದಾಸ್ ಆಕ್ಷೇಪಣೆ ಏನೂ ಇರಲಿಲ್ಲ. 'ನನ್ನ ಫೋಟೊ ಎಷ್ಟು ಬೇಕಾದರೂ ತೆಗೆಯಿರಿ. ನನ್ನ ಜೊತೆಗೆ ನೀವು ನಿಂತ ಫೋಟೋವನ್ನು ಬೇಕಿದ್ದರೆ ನಿಮ್ಮ ಗೆಳೆಯರು ತೆಗೆಯಲಿ. ಆದರೆ ಸೆಲ್ಫೀ ತೆಗೆಯಲು ನಾನು ಅವಕಾಶ ಕೊಡುವುದಿಲ್ಲ' ಎಂಬ ಹೇಳಿಕೆಯನ್ನು ಅವರು ನೀಡಿದ್ದರು. 'ಎಲ್ಲವನ್ನೂ ನಾವೇ ಮಾಡಬೇಕು ಎನ್ನುವ ಜನರ ಧೋರಣೆ ಸರಿಯಲ್ಲ. ಫೋಟೋವನ್ನು ಬೇರೆಯವರು ತೆಗೆಯಲು ಅವಕಾಶ ಕೊಡಿ' ಎಂದು ವಿಭಿನ್ನ ಸಮರ್ಥನೆಯನ್ನೂ ಅವರು ನೀಡಿದ್ದರು. ಆಗಲೂ ಅವರ ವಿರುದ್ಧ ಟೀಕೆಗಳು ಕೇಳಿಬಂದಿದ್ದವು.

ಸೆಲ್ಫೀ ವಿವಾದ ಅಷ್ಟೇನೂ ಆಕ್ಷೇಪಾರ್ಹ ಅನ್ನಿಸಲಿಕ್ಕಿಲ್ಲ. ಆದರೆ ಮಹಿಳೆಯರು ಜೀನ್ಸ್ ಧರಿಸುವ ಬಗ್ಗೆ ಮತ್ತು ಅಯ್ಯಪ್ಪ ದೇವಾಲಯಕ್ಕೆ ಮಹಿಳೆಯರ ಪ್ರವೇಶಕ್ಕೆ ಯೇಸುದಾಸ್ ಎತ್ತಿರುವ ಆಕ್ಷೇಪಗಳ ಕುರಿತು ಅವರ ಅಭಿಮಾನಿ ಮಹಿಳೆಯರಿಗೂ ಸಿಟ್ಟಿದೆ. ತಮ್ಮ ಸುಮಧುರ ಧ್ವನಿಯ ಹಿನ್ನೆಲೆಯಲ್ಲಿ ಗಾನಗಂಧರ್ವ ಎಂದೇ ಹೆಸರು ಪಡೆದಿರುವ ಈ ಮಿತಭಾಷಿ ಹೀಗೇಕೆ ಮಾತಿನಲ್ಲಿ ವಿವಾದ ಸೃಷ್ಟಿಸುತ್ತಾರೆ.. ಎನ್ನುವುದು ಹಲವರ ಪ್ರಶ್ನೆ. ಹಾಡಿನ ವಿಷಯಕ್ಕೆ ಬಂದರೆ ಶಾಸ್ತ್ರೀಯ, ಭಕ್ತಿಗೀತೆ ಮತ್ತು ಸಿನಿಮಾ ಎಂದೆನ್ನದೆ ಎಲ್ಲ ಹಾಡುಗಳನ್ನೂ ಅದ್ಭುತವಾಗಿ ಹಾಡಬಲ್ಲ ಈ ಗಾಯಕ ನಿಜಜೀವನದಲ್ಲಿ ಮೃದುಭಾಷಿಯೂ ಹೌದು.

ಗಾಯಕರಾಗಿ ಯೇಸುದಾಸ್ ಪಡೆದಿರುವ ಪ್ರಶಸ್ತಿಗಳನ್ನು ಲೆಕ್ಕ ಇಡುವುದು ಕಷ್ಟ. ಪದ್ಮಶ್ರೀ, ಪದ್ಮಭೂಷಣ ಮತ್ತು ಪದ್ಮವಿಭೂಷಣ – ಹೀಗೆ ರಾಷ್ಟ್ರಮಟ್ಟದ ಮೂರೂ ಪ್ರಶಸ್ತಿಗಳನ್ನು ಗಳಿಸಿದ ಹೆಗ್ಗಳಿಕೆ ಇವರದ್ದು. ಸಿನಿಮಾ ಗಾಯನಕ್ಕಾಗಿ ಎಂಟು ಸಲ ರಾಷ್ಟ್ರಪ್ರಶಸ್ತಿ ಗೆದ್ದಿದ್ದಾರೆ. 15 ಸಲ ಫಿಲಂಫೇರ್ ಪ್ರಶಸ್ತಿ ಗಳಿಸಿದ್ದಾರೆ. ಮಲಯಾಳಿ, ತಮಿಳು, ತೆಲುಗು, ಕನ್ನಡ, ಬಂಗಾಳಿ ಚಿತ್ರಗೀತೆಗಳಿಗಾಗಿ ಒಟ್ಟು 43 ಸಲ ಆಯಾ ರಾಜ್ಯ ಸರ್ಕಾರಗಳು ನೀಡುವ ರಾಜ್ಯ ಪ್ರಶಸ್ತಿಗಳನ್ನು ಗೆದ್ದಿದ್ದಾರೆ! ಗಾಯನದ ಮಟ್ಟಿಗೆ ಈತ ಅಜಾತಶತ್ರುವೇ. ಆದರೆ ಮಾತುಗಳ ಮಟ್ಟಿಗೆ?

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65